ಸಂಪುಟ/Volume : 48
ಸಂಚಿಕೆ/Issue : 2
ಪುಟ/Pages : 20
ಬೆಲೆ/Price : ₹ 15/–

# ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ

ನವೆಂಬರ್ 2025 ಮಾಸ ಪತ್ರಿಕೆ

**Akhila Karnataka Shikshaka Samachar | November 2025 | Monthly**




A Journal of Karnataka Rajya Madhyamika Shikshaka Sangha (R.)

# ಸಂಪಾದಕೀಯ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು 1965ರಲ್ಲಿ ನಾಲ್ಕಾರು ಜನ ಹಿತ ಚಿಂತಕರ ಚಿಂತನ ಮಂಥನದ ಫಲಶೃತಿಯಿಂದ ಜನ್ಮತಾಳಿತು. ನಮ್ಮೆಲ್ಲರ ಹಿರಿಯ ಚೇತನ, ಸರಳತೆಯನ್ನು ಜೀವನದುದ್ದಕ್ಕೂ ಪಾಲಿಸಿದ ಸಂತ ಹಾಗೂ ಶಿಕ್ಷಣ ತಜ್ಞರಾದ ಶ್ರೀ ಕೃ ನರಹರಿಯವರ ಇಚ್ಛಾಶಕ್ತಿಯ ಫಲವಾಗಿ ಶಿಕ್ಷಕ ಸಂಘವು ವಿವಿಧ ಕಾರ್ಯಕ್ರಮಗಳನ್ನು ವಿವಿಧ ಜಿಲ್ಲೆಗಳಲ್ಲಿ ಮಾಡಲು ಸಾಧ್ಯವಾಯಿತು. ಶಿಕ್ಷಣ, ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕಾರಣೀಕರ್ತರಾದವರು ಮಾನ್ಯ ಶ್ರೀ ಕೃ ನರಹರಿಯವರು. ತನಗೆ ಸ್ವಲ್ಪ ಸಮಾಜಕ್ಕೆ ಸರ್ವಸ್ವ ಈ ನಂಬಿಕೆಯಲ್ಲಿಯೇ ಜೀವನವನ್ನು ಮುಡುಪಾಗಿಟ್ಟವರು.

ಶಿಕ್ಷಕ ಸಂಘದ ಪ್ರಮುಖ ಕಾರ್ಯಕ್ರಮಗಳಾದ ಸದಸ್ಯತಾ ಅಭಿಯಾನ, ಗುರುವಂದನಾ ಕಾರ್ಯಕ್ರಮ, ಪ್ರತಿಭಾ ಪುರಸ್ಕಾರ, ಶೈಕ್ಷಣಿಕ ಕಾರ್ಯಾಗಾರಗಳು, ಸಂಕಲ್ಪದಿನ ಇವುಗಳು ಎಲ್ಲಾ ಜಿಲ್ಲೆಗಳಲ್ಲಿ ನಿರಂತರವಾಗಿ ನಡೆಯಬೇಕು ಹಾಗಾದಾಗ ಮಾತ್ರ ಸಶಕ್ತ ಜಿಲ್ಲೆಯೆಂದು ಆಯಾ ಜಿಲ್ಲೆಗಳನ್ನು ಪರಿಗಣಿಸಬಹುದು ಎಂದು ಕಾರ್ಯಕಾರಿಣಿ ಸಭೆಗಳಲ್ಲಿ ನರಹರಿಯವರು ತಿಳಿಸುತ್ತಿದ್ದರು. ಈ ಎಲ್ಲಾ ಕಾರ್ಯಕ್ರಮಗಳ ಸಾಕಾರತೆಗೆ ನಾನು ಮಾತ್ರ ಕಾರಣನಲ್ಲ, ಎಲ್ಲಾ ಕಾರ್ಯಕರ್ತರ ದೃಢನಿರ್ಧಾರದಿಂದ ಮಾತ್ರ ಇದು ಸಾಧ್ಯ ಎಂದು ಹೇಳುತ್ತಿದ್ದರು. ಕಾರ್ಯಕರ್ತರನ್ನೆಲ್ಲ ಬಹಳ ಪ್ರೀತಿ ಪೂರ್ವಕವಾಗಿ ಮಾತನಾಡಿಸುತ್ತಿದ್ದರಲ್ಲದೆ, ಆಯಾ ಜಿಲ್ಲೆಯ ಶಿಕ್ಷಕರ ಸಮಸ್ಯೆಗಳನ್ನು ಆಲಿಸುತ್ತಿದ್ದರು. ಹಾಗೆಯೇ ಹೀಗೆ ಮಾಡಿದರೆ ಸೂಕ್ತ ಎಂದು ಪರಿಹಾರವನ್ನು ಸೂಚಿಸುತ್ತಿದ್ದರು. ಶ್ರೀ ಕೃ ನರಹರಿಯವರು ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿದ್ದರು. ಅವರು ಎಲ್ಲಾ ಕಾರ್ಯಕ್ಷೇತ್ರಗಳಲ್ಲಿ ನಿಪುಣರು. ಸಂಘ, ಎ.ಬಿ.ವಿ.ಪಿ, ವಿದ್ಯಾಭಾರತಿ, ಜನಸೇವಾ, ಗುರುಕುಲ, ಸಂಸ್ಕೃತ ಭಾರತಿ, ಎಬಿಆರ್‌ಎಸ್‌ಎಂ, ಮಿಥಿಕ್ ಸೊಸೈಟಿ ಹಾಗೂ ರಾಷ್ಟ್ರೋತ್ಥಾನ ಪರಿಷತ್ ಇನ್ನೂ ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಇತರರಿಗೂ ಪ್ರೇರಣಾದಾಯಕರಾಗಿದ್ದರು. ಶ್ರೀ ನರಹರಿಯವರು ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ಸತತವಾಗಿ ಮೂರುಬಾರಿ ಆಯ್ಕೆಯಾಗಿದ್ದ ರಾಜಕೀಯ ಚತುರರೂ ಆಗಿದ್ದರು. ನಾನು ಬೆಂಗಳೂರು ಶಿಕ್ಷಕ ಕ್ಷೇತ್ರದ ಅವರ ಎರಡನೇ ಅವಧಿಯ ಚುನಾವಣೆಯಲ್ಲಿ ಸಂಪರ್ಕಕ್ಕೆ ಬಂದು ಅವರಿಗಾಗಿ ಕಾರ್ಯನಿರ್ವಹಿಸಿ ತದನಂತರ ಶಿಕ್ಷಕ ಸಂಘಕ್ಕೆ ಸದಸ್ಯನಾಗಿ ಅವರ ಮಾರ್ಗದರ್ಶನದಂತೆ ಕಾರ್ಯವನ್ನು ನಿರ್ವಹಿಸಿದೆ. ಬೆಂಗಳೂರು ಉತ್ತರ ಜಿಲ್ಲೆಯ ತಾಲ್ಲೂಕು, ಜಿಲ್ಲೆಯಲ್ಲಿ ಜವಾಬ್ದಾರಿ ನಿರ್ವಹಿಸಿ ತದನಂತರ ನರಹರಿಯವರು, ಜಿ.ಎಸ್ ಕೃಷ್ಣಮೂರ್ತಿ, ನಾಗಭೂಷಣರಾಯರು, ಬಾಲಕೃಷ್ಣಭಟ್ಟರು ಈ ಎಲ್ಲಾ ಹಿರಿಯರ ಸಹಕಾರದಿಂದ ಮಾಧ್ಯಮಿಕ ಶಿಕ್ಷಕ ಸಂಘದ ಕೋಶಾಧ್ಯಕ್ಷನಾಗಿ ಸೇವೆ ಸಲ್ಲಿಸಿದೆ. ನರಹರಿಯವರು ಲೆಕ್ಕ-ಪತ್ರವನ್ನು ಹೇಗೆ ನಿರ್ವಹಿಸಬೇಕು, ಹಣಕಾಸಿನ ವಿಷಯದಲ್ಲಿ ಹೇಗೆ ಪಾರದರ್ಶಕವಾಗಿರಬೇಕು ಎಂಬುದನ್ನು ತಿಳಿಸಿಕೊಟ್ಟಿದ್ದರು. ಕೊನೆಯವರೆಗೂ ಅವರ ಆದೇಶದಂತೆ ಕಾರ್ಯನಿರ್ವಸಿದೆ ಎಂಬ ಹೆಮ್ಮೆ ಇದೆ. ಎಲ್ಲಾ ಕಾರ್ಯಗಳಲ್ಲಿ ಅಗ್ರೇಸ್ಸಿವ್ ಆಗಿರಬೇಕು ಹಾಗೂ ಪ್ರಾಮಾಣಿಕತೆಯಿಂದ ಇರಬೇಕು ಎಂದು ಕಾರ್ಯಕರ್ತರಿಗೆ ತಿಳಿಸುತ್ತಿದ್ದರು, ನರಹರಿಯವರು ವಿಧಾನ ಪರಿಷತ್ ಸದಸ್ಯರಾಗಿದ್ದಾಗ ಶೈಕ್ಷಣಿಕ ವಿಚಾರಗಳ ಬಗ್ಗೆ, ಶಿಕ್ಷಕರ ಸಮಸ್ಯೆಗಳ ಬಗ್ಗೆ ಸದನದಲ್ಲಿ ಗಟ್ಟಿಯಾಗಿ ಧ್ವನಿ ಎತ್ತಿ ಸಮಸ್ಯೆಗಳನ್ನು ತಿಳಿಸುತ್ತಿದ್ದರು. ಹಾಗೆಯೇ ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಪರಿಹಾರವನ್ನೂ ಕೂಡ ಸೂಚಿಸುತ್ತಿದ್ದರು. ಶಿಕ್ಷಕರ ಸಮಸ್ಯೆಗಳನ್ನು ನಿರ್ವಹಿಸುವಾಗ ಸ್ವತಃ ಶಿಕ್ಷಕರ ಜೊತೆಗೂಡಿ ಕಛೇರಿಗಳ ಅಧಿಕಾರಿಗಳನ್ನು ಭೇಟಿಯಾಗಿ ನಯವಾಗಿ ಹಾಗೂ ಕೆಲ ಸಂದರ್ಭಗಳಲ್ಲಿ ಕಠೋರವಾಗಿ ಮಾತನಾಡಿ ಕೆಲಸವಾಗುವವರೆಗೂ ಬಿಡುತ್ತಿರಲಿಲ್ಲ. ಹೀಗೆ ಎಷ್ಟೋ ಶಿಕ್ಷಕರ, ಶಿಕ್ಷಣ ಸಂಸ್ಥೆಗಳ ಸಮಸ್ಯೆಗಳನ್ನು ಬಗೆಹರಿಸುವ ಕೆಲಸದಲ್ಲಿ ಆನಂದವನ್ನು ಪಡುತ್ತಿದ್ದರು. ಈ ಕಾರ್ಯವು ಕೇವಲ ಬೆಂಗಳೂರು ಶಿಕ್ಷಕರಿಗೆ ಮಾತ್ರ ಸೀಮಿತವಾಗಿರಲಿಲ್ಲ.

ಮಾನ್ಯ ನರಹರಿಯವರು ಅವರ ಜೀವನದುದ್ದಕ್ಕೂ ಸೇವಾಹಿ ಪರಮೋಧರ್ಮ ಎಂಬ ಧ್ಯೇಯವನ್ನು ಪಾಲಿಸಿದವರು. ಅಲ್ಲದೆ ಎಲ್ಲಾ ಕಾರ್ಯಕರ್ತರು ಈ ದಿಶೆಯಲ್ಲಿ ಸಾಗಬೇಕು ಎಂಬುದು ಅವರ ಮನದಾಸೆಯಾಗಿತ್ತು. ಅವರ ಮಾರ್ಗದರ್ಶನವೇ ನಮ್ಮೆಲ್ಲರಿಗೂ ಶ್ರೀರಕ್ಷೆಯಾಗಿತ್ತು. ಈಗ ಅವರು ಭೌತಿಕವಾಗಿ ನಮ್ಮೊಂದಿಗಿಲ್ಲ, ಆದರೆ ಅವರ ಆಶೀರ್ವಾದ ಸದಾ ಸರ್ವದಾ ನಮ್ಮೊಂದಿಗಿರುತ್ತದೆ ಎಂಬ ಆಶಾಭಾವನೆಯೊಂದಿಗೆ ಮಾಧ್ಯಮಿಕ ಶಿಕ್ಷಕ ಸಂಘದ ಎಲ್ಲಾ ಕಾರ್ಯಕರ್ತರು ಶ್ರದ್ಧಾಪೂರ್ವಕವಾಗಿ ನಮನಗಳನ್ನು ಸಲ್ಲಿಸುತ್ತಿದ್ದೇವೆ.

ಶ್ರೀ. ನರಹರಿಯವರ ಈ ವಿಶೇಷ ಸಂಚಿಕೆಗೆ ಕಿರುಲೇಖನಗಳನ್ನು ಬರೆದಿರುವ ಎಲ್ಲಾ ಪ್ರಮುಖರಿಗೂ, ಕಾರ್ಯಕರ್ತರಿಗೂ ತುಂಬು ಹೃದಯದ ಧನ್ಯವಾದಗಳು.

ಸಂಪಾದಕ

## ಸಂಪಾದಕ ಮಂಡಳಿ

**ಗೌರವ ಸಂಪಾದಕರು**
ಹೆಚ್. ನಾಗಭೂಷಣರಾವ್

**ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು**
ಜೆ. ಎಮ್. ಜೋಶಿ

**ವ್ಯವಸ್ಥಾಪಕ ಸಂಪಾದಕರು**
ಸಂದೀಪ ಬೂದಿಹಾಳ

**ಗೌರವ ಸಲಹೆಗಾರರು**
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

**ಸಂಪಾದಕ ಮಂಡಳಿ**
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

**ವಿನ್ಯಾಸಕಾರರು**
ಪ್ರೇರಣಾ

**ಕಛೇರಿ ವ್ಯವಸ್ಥಾಪಕರು**
ವರಲಕ್ಷ್ಮಿ ಕೆ. ಎನ್.




ಶ್ರೀ ಕೃ ನರಹರಿಯವರ ಸ್ವಗೃಹದಲ್ಲಿನ ಅಪರೂಪದ ಭಾವಚಿತ್ರ

# ವಿವಿಧೆಡೆಗಳಲ್ಲಿ ಕೃ. ನರಹರಿ ಅವರಿಗೆ ಶ್ರದ್ಧಾಂಜಲಿ



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.) ಬೆಳಗಾವಿ ಜಿಲ್ಲೆ ವತಿಯಿಂದ ಅಗಲಿದ ಚೇತನ ದಿ. ಕೃ. ನರಹರಿ ಜಿ ಅವರಿಗೆ ಶ್ರದ್ಧಾಂಜಲಿ ಸಭೆಯಲ್ಲಿ ನುಡಿನಮನ ಸಲ್ಲಿಸಿ, ಪುಷ್ಪ ಅರ್ಚನೆ ಮಾಡಲಾಯಿತು. ಶಿಕ್ಷಕ ಸಂಘದ ಹಿರಿಯ ಕಾರ್ಯಕರ್ತರು, ಮುಖ್ಯ ಶಿಕ್ಷಕರು, ಶಿಕ್ಷಕರು ಭಾಗವಹಿಸಿದ್ದರು.

ಉಮೇಶ ಕುಲಕರ್ಣಿ, ವಿಭಾಗ ಪ್ರಮುಖರು, ಬೆಳಗಾವಿ



**10–10–2025** ರಂದು ಕರ್ನಾಟಕ ರಾಜ್ಯ ಪ್ರೌಢಶಾಲಾ ಸಂಸ್ಕೃತ ಅಧ್ಯಾಪಕರ ಸಂಘದಿಂದ ದಿವಂಗತ ಪೂಜ್ಯ ಪ್ರೊಫೆಸರ್ ಕೃ ನರಹರಿ ಅವರಿಗೆ ನುಡಿನಮನ ಕಾರ್ಯಕ್ರಮವನ್ನು ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ ಚಾಮರಾಜಪೇಟೆ ಬೆಂಗಳೂರಿನಲ್ಲಿ ಏರ್ಪಡಿಸಲಾಗಿತ್ತು. ಕರಾಮಾಶಿಸಂನ ಉಪಾಧ್ಯಕ್ಷರಾದ ಶ್ರೀ ಚಿದಾನಂದ ಪಾಟೀಲ್ ಅವರು ಶ್ರೀಯುತರ ಸಮಾಜ ಸೇವೆಯ ಹತ್ತು ಹಲವು ಘಟನೆಗಳನ್ನು ಸಭಿಕರಿಗೆ ವಿವರಿಸಿದರು. ಶ್ರೀಯುತರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸದ್ಗತಿ ಸಿಗಲೆಂದು ಭಗವಂತನನ್ನು ಪ್ರಾರ್ಥಿಸಲಾಯಿತು.



ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರ ಜಿಲ್ಲಾ ಪ್ರಮುಖರಿಂದ ದಿವಂಗತ ಕೃ ನರಹರಿಯವರ ಶ್ರದ್ಧಾಂಜಲಿ ಕಾರ್ಯಕ್ರಮ



ಕೇಂದ್ರ ಕಾರ್ಯಾಲಯ ಯಾದವಸ್ಮೃತಿಯಲ್ಲಿ ಕೃನರಹರಿ ಜಿರವರ ಶ್ರದ್ಧಾಂಜಲಿ ಕಾರ್ಯಕ್ರಮ







## ಸರ್ವಸ್ವವನ್ನು ಸಮಾಜಕ್ಕೆ ಸಮರ್ಪಿಸಿದ ಪ್ರೊ. ಕೃ. ನರಹರಿ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಸಂರಕ್ಷಕರಾದ ಕೃ.ನರಹರಿ ಅವರು ತಮ್ಮ ಸರ್ವಸ್ವವನ್ನು ಸಮಾಜಕ್ಕೆ ಸಮರ್ಪಸಿದ ಮಹಾನ್ ಶಿಕ್ಷಣ ತಜ್ಞರು ಇವರ ನಿಧನದಿಂದ ಒಂದು ಸಮಾಜ ಸಮರ್ಪಿತ ಜೀವನ ಅಂತ್ಯಗೊಂಡಿದೆ ಎಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಆಯೋಜಿಸಿರುವ ಶ್ರದ್ಧಾಂಜಲಿ ಸಭೆಯಲ್ಲಿ ಕಲಬುರಗಿ ವಿಭಾಗ ಪ್ರಮುಖ ಚಂದ್ರಶೇಖರ ಪಾಟೀಲ ತಿಳಿಸಿದರು.

ಕೃ ನರಹರಿಯವರು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಅಧ್ಯಕ್ಷರಾಗಿ 24 ವರ್ಷಗಳ ಕಾಲ ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನಂತರ, 18 ವರ್ಷಗಳ ಕಾಲ ವಿಧಾನ ಪರಿಷತ್ ಸದಸ್ಯರಾಗಿ ಶಿಕ್ಷಣ ಕ್ಷೇತ್ರ ಮತ್ತು ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಅಲ್ಲದೆ ರಾಜ್ಯಾದ್ಯಂತ ತಮ್ಮ ಪ್ರೇರಣದಾಯಿ ಚಟುವಟಿಕೆಗಳ ಮೂಲಕ ಹಲವಾರು ಕಾರ್ಯಕರ್ತರನ್ನು ಸೃಷ್ಟಿ ಮಾಡಿದ ಶ್ರೇಯಸ್ಸು ಮಾನ್ಯ ಕೃ ನರಹರಿಯವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲಬುರಗಿ ಜಿಲ್ಲಾಧ್ಯಕ್ಷ ಸಂಜೀವ ಕುಮಾರ್ ಪಾಟೀಲ ವಹಿಸಿದ್ದರು. ಶಿಕ್ಷಕ ಶಿವಶರಣ ಉದನೂರ ವಂದನೆ ಸಲ್ಲಿಸಿದರು. ಸಂತಾಪ ಸಭೆಯಲ್ಲಿ ಅನೇಕ ಶಿಕ್ಷಕರು ಪಾಲ್ಗೊಂಡಿದ್ದರು.

MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-11-2025 Date of Posting 20th or 21st of every month Posted at Periodical Rate

# ಶ್ರೀ ಕೃ. ನರಹರಿಯವರ ಕುಟುಂಬಸ್ಥರು ನೆರವೇರಿಸಿದ ಕೃ ನರಹರಿಯವರ ಶ್ರದ್ಧಾಂಜಲಿ ಕಾರ್ಯಕ್ರಮ



ದಿನಾಂಕ 19–10–2025 ರಂದು ಜಯನಗರ ಬಡಾವಣೆಯಲ್ಲಿರುವ ಪ್ರಸನ್ನ ಕಲ್ಯಾಣಮಂಟಪದಲ್ಲಿ ಮಾನ್ಯ. ಕೃ.ನರಹರಿಯವರ ವೈಕುಂಠಸಮಾರಾಧನೆಯ ಪ್ರಯುಕ್ತ ಅವರ ಕುಟುಂಬದವರು ದಿವಂಗತರ ಆತ್ಮೀಯ ಬಳಗವನ್ನು ಆಹ್ವಾನಿಸಲಾಗಿತ್ತು. ಉಪಸ್ಥಿತರಾಗಿದ್ದ ಕೃ.ನರಹರಿಯವರ ಅಭಿಮಾನಿಗಳ ಕಡೆಯಿಂದ ಕೆಲವು ಹಿರಿಯರು ತಮ್ಮೊಂದಿಗಿನ ಅವರ ಒಡನಾಟವನ್ನು ಸ್ಮರಿಸುತ್ತ... ನುಡಿನಮನಗಳನ್ನು ಅರ್ಪಿಸಿದರು.

ಶ್ರೀ ತಿಪ್ಪೇಸ್ವಾಮಿಯವರು ಮಾತನಾಡುತ್ತ ನರಹರಿಯವರು ಸಂಘದ ನಿರ್ದೇಶನಕ್ಕೆ ಅನುಸಾರವಾಗಿಯೇ ಮೂರು ಬಾರಿ ಶಾಸಕರಾಗಿ ಶಿಕ್ಷಕ ಸಮುದಾಯಕ್ಕೆ, ಶಿಕ್ಷಣಕ್ಷೇತ್ರಕ್ಕೆ ಅವರು ಸಲ್ಲಿಸಿರುವ ಸೇವೆಯನ್ನು ಕುರಿತು ಹೇಳುತ್ತ.. ಸ್ವಂತಕ್ಕಾಗಿ ಏನನ್ನೂ ಬಯಸದ, ನಿರೀಕ್ಷಿಸದ ಅವರ ನಿಸ್ವಾರ್ಥ ವ್ಯಕ್ತಿತ್ವ ಸಮಾಜಸೇವೆಯಲ್ಲಿ ತೊಡಗಿದ ತಮ್ಮಂತಹ ಹಲವಾರು ಕಾರ್ಯಕರ್ತರಿಗೆ ಸದಾಕಾಲವೂ ಮಾರ್ಗದರ್ಶನ ಮಾಡುತ್ತಿದ್ದರೆಂದು ಕೃತಜ್ಞತೆಯನ್ನು ಸಲ್ಲಿಸಿದರು.

ಹಿರಿಯ ಸಂಸ್ಕೃತ ವಿದ್ವಾಂಸರಾದ ಶ್ರೀ ಕೋಟೆಮನೆ ರಾಮಚಂದ್ರಭಟ್ ಅವರು ಚನ್ನೇನಹಳ್ಳಿಯಲ್ಲಿರುವ ಜನಸೇವಾಕೇಂದ್ರವೆಂಬ ಶಿಕ್ಷಣ ಕೇಂದ್ರವು ಒಂದು ಆದರ್ಶ ಸಂಸ್ಥೆಯಾಗಿ ಬೆಳೆಯುವಲ್ಲಿ ಕೃ.ನರಹರಿಯವರ ಅಮೂಲ್ಯ ಕೊಡುಗೆಯನ್ನು ಸ್ಮರಿಸುತ್ತ, ವಿದ್ಯಾರ್ಥಿಗಳಲ್ಲಿ ಮತ್ತು ಶಿಕ್ಷಕರಲ್ಲಿಯೂ ಸಹ ಮೌಲ್ಯಪ್ರಜ್ಞೆಯ ಅಗತ್ಯವನ್ನು ನರಹರಿಯವರು ಯಾವಾಗಲೂ ಹೇಳುತ್ತಿದ್ದರೆಂಬುದನ್ನೂ ಸಹ ಸ್ಮರಿಸುತ್ತ, ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಕೃ.ನರಹರಿಯವರಿಗಿಂತ ಹಲವು ವರ್ಷಗಳೇ ಕಿರಿಯರಾದರೂ ಅವರೊಂದಿಗೆ ಆತ್ಮೀಯ ಒಡನಾಟ ಹೊಂದಿದ್ದ ಹೆಚ್.ನಾಗಭೂಷಣರಾವ್ ಸಂಘದ ಕಾರ್ಯನಿಮಿತ್ತ ದೇಶದ ಅನೇಕ ಸ್ಥಳಗಳಿಗೆ ಅವರೊಂದಿಗೆ ಪ್ರಯಾಣ ಮಾಡಿದ್ದ ಸಂದರ್ಭಗಳನ್ನು ನೆನಪು ಮಾಡಿಕೊಂಡರು. ಕೃ.ನರಹರಿಯವರಲ್ಲಿದ್ದ ಹೊಂದಾಣಿಕೆಯ ಸ್ವಭಾವ ಸದಾ ನೆನಪಿಡುವಂತಹುದು. ಅನೇಕ ಸಂದರ್ಭಗಳಲ್ಲಿ ತಮಗೆ ಅತಿ ಅವಶ್ಯಕವಾದ ಆಹಾರ ಪದಾರ್ಥಗಳನ್ನೂ ಸಹ ಜೊತೆಯಲ್ಲಿದ್ದವರಿಗೆ ಬೇಡವೆನಿಸಿದಲ್ಲಿ ತಾವೂ ತ್ಯಜಿಸುತ್ತಿದ್ದರಂತೆ. ಅವರು ಯಾರಿಗೂ, ಯಾವಾಗಲೂ ನೋವು ಮಾಡದವರು, ಅತಿ ಶಿಸ್ತಿನ, ಸಮಯಪಾಲನೆಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದವರು. ಯಾವುದೇ ಕೆಲಸವನ್ನಾದರೂ, ಯಾರಿಗಾದರೂ ಕಲಿಸುವಾಗ ಅವರಲ್ಲಿರುತ್ತಿದ್ದ ತಾಳ್ಮೆ ಅನುಕರಣೀಯ. ಸಂಘದ ಆದೇಶಗಳನ್ನು ಕಣ್ಣುಮುಚ್ಚಿ ಪಾಲಿಸುತ್ತಿದ್ದವರು. ಮೌಲ್ಯಶಿಕ್ಷಣದ ಬಗ್ಗೆ, ನಮ್ಮ ಇತಿಹಾಸದ ಬಗ್ಗೆ ಅವರಿಗೆ ಅಪಾರ ಕಾಳಜಿ ಇತ್ತು.

ಕುಟುಂಬದ ಪರವಾಗಿ ಶ್ರೀ ಕೃಷ್ಣಪ್ರಸಾದ್‌ರವರು ನರಹರಿಯವರ ಒಳ್ಳೆಯ ಗುಣಗಳನ್ನು ನೆನಪಿಸಿಕೊಂಡರು. ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.





ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಆಯೋಜಿಸಿದ್ದ ನರಹರಿ ಜೀ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಮತ್ತು ಎಬಿಆರ್‌ಎಸ್‌ಎಂ ಹಿರಿಯರು

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com